JUNE 07, 2025

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

- ರಾಜ್ಯದ ಪ್ರತಿ ಗ್ರಾಮ ಪಂಚಾಯಿತಿಗಳಲ್ಲೂ ಕರ್ನಾಟಕ ಪಬ್ಲಿಕ್ ಶಾಲೆ –ಮಧು ಬಂಗಾರಪ್ಪ
- ಮೀನುಗಾರರ ಸುರಕ್ಷತೆ ಸರ್ಕಾರದ ಆದ್ಯತೆ– ಮಂಕಾಳ ವೈದ್ಯ
- ಇಂದು, ಮುಸ್ಲಿಂ ಬಾಂಧವರಿಂದ, ಬಕ್ರೀದ್ ಆಚರಣೆ: ಗಣ್ಯರಿಂದ ಶುಭಾಶಯ
- ಕೇಂದ್ರ ಸರ್ಕಾರಕ್ಕೆ 11 ವರ್ಷ ಪೂರ್ಣ: ಶುದ್ಧ ಇಂಧನ ಕ್ಷೇತ್ರದಲ್ಲಿ ಭಾರತ ಜಾಗತಿಕ ನೇತಾರ.

<><><>

ಈಗ ವಾರ್ತೆಗಳ ವಿವರ

<><><>

ಶಿಕ್ಷಣ ತಜ್ಞ, ವಿಚಾರವಾದಿ ಡಾಕ್ಟರ ಎಚ್. ನರಸಿಂಹಯ್ಯ ಅವರ ತತ್ವ, ಚಿಂತನೆಗಳನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಚುರಪಡಿಸುವಂತಾಗಲು ಎಲ್ಲರೂ ಕೈ ಜೋಡಿಸಬೇಕು, ಅವರ ವೈಚಾರಿಕ ಹಾಗೂ ವೈಜ್ಞಾನಿಕ ಚಿಂತನೆಗಳು ವಿದ್ಯಾರ್ಥಿಗಳು ಹಾಗೂ ಯುವಜನರಿಗೆ ತಲುಪಬೇಕು ಎಂದು ಡಾಕ್ಟರ ಎಚ್. ನರಸಿಂಹಯ್ಯ ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಪ್ರವಾಸೋದ್ಯಮ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎನ್.ಎಚ್ ಶಿವಶಂಕರ ರೆಡ್ಡಿ ಹೇಳಿದರು. ನರಸಿಂಹಯ್ಯ ಅವರ ಹುಟ್ಟೂರು ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲೂಕು, ಹೊಸೂರು ಗ್ರಾಮದಲ್ಲಿ ಆಯೋಜಿಸಲಾಗಿದ್ದ ಜಯಂತಿ ಕಾರ್ಯಕ್ರಮದಲ್ಲಿ, ಪಾಲ್ಗೊಂಡು ಮಾತನಾಡಿದರು. ನರಸಿಂಹಯ್ಯ ಅವರ ಹೆಸರಿನಲ್ಲಿ ಸರ್ಕಾರವು ಪ್ರಾಧಿಕಾರವನ್ನು ರಚಿಸಿರುವುದು ಮನನೀಯ ಎಂದರು.

<><><>

ರಾಜ್ಯದಲ್ಲಿ ಪ್ರತಿ ಗ್ರಾಮ ಪಂಚಾಯಿತಿಗೆ ಒಂದರಂತೆ, ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಆರಂಭಿಸುವ ಉದ್ದೇಶವನ್ನು ಸರ್ಕಾರ ಹೊಂದಿದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಖಾತೆ ಸಚಿವ ಮಧು ಬಂಗಾರಪ್ಪ ಹೇಳಿದರು. ಬೆಂಗಳೂರು, ಮಾಗಡಿ ಜಾಲಮಂಗಲದಲ್ಲಿ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ನೂತನ ಕಟ್ಟಡ ಉದ್ಘಾಟಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದ ಎಲ್ಲ ಗ್ರಾಮ ಪಂಚಾಯಿತಿಗಳಲ್ಲಿ ಕರ್ನಾಟಕ ಪಬ್ಲಿಕ್ ಶಾಲೆ ತೆರೆಯಲು ಕನಿ ್ಠ 4ರಿಂದ 5 ವ ್ಷ ಬೇಕಾಗಬಹುದು. ಸದ್ಯ ರಾಜ್ಯದಲ್ಲಿ 350 ಕೆ.ಪಿ.ಎಸ್. ಶಾಲೆಗಳಿದ್ದು, ಮುಂದಿನ ದಿನಗಳಲ್ಲಿ ಏ ್ಯನ್ ಡೆವಲಪಮೆಂಟ್ ಬ್ಯಾಂಕ್ ಸಹಯೋಗದಲ್ಲಿ, 500 ಶಾಲೆಗಳನ್ನು ಆರಂಭಿಸಲು ಉದ್ದೇಶಿಸಲಾಗಿದೆ ಎಂದರು.

<><><>

ಬಾಗಲಕೋಟೆ ತೋಟಗಾರಿಕಾ ವಿಶ್ವವಿದ್ಯಾಲಯ, ಕೃಷಿ ವಿಜ್ಞಾನ ಕೇಂದ್ರದ ಸಹಯೋಗದಲ್ಲಿ, ಬಾಗಲಕೋಟೆ ತಾಲೂಕು, ಬೇವಿನಮಟ್ಟಿ, ನೀರಲಕೇರಿ ಗ್ರಾಮದಲ್ಲಿ ಕೃಷಿ ಸಂಕಲ್ಪ ರಾಷ್ಟ್ರೀಯ ಅಭಿಯಾನ ಜರುಗಿತು. ಕೃಷಿ ವಿಜ್ಞಾನಿ ಡಾಕ್ಟರ ಸಿದ್ದಪ್ಪ ಅಂಗಡಿ ಅವರು ಮಾತನಾಡಿ ಲಾಭದಾಯಕ ಕೃಷಿಗಾಗಿ ರೈತರು ಅಂತರ್ ಬೆಳೆಗಳ ಬಗ್ಗೆ ಮಾಹಿತಿ ಪಡೆದು, ಆಧುನಿಕ ಕೃಷಿ ಪದ್ಧತಿಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದರು.

<><><>

ವಿಜಯನಗರ ಜಿಲ್ಲೆ ಕೊಟ್ಟೂರು ತಾಲೂಕು ಹ್ಯಾಳ್ಯಾ, ಬೇವೂರು ಹಾಗೂ ಗೊಲ್ಲರಹಳ್ಳಿಯಲ್ಲಿ ಜರುಗಿದ ವಿಕಸಿತ ಕೃಷಿ ಸಂಕಲ್ಪ ರಾಷ್ಟ್ರೀಯ ಅಭಿಯಾನದಲ್ಲಿ ರೈತರಿಗೆ ಈರುಳ್ಳಿ ಹಾಗೂ ಮೆಕ್ಕೆಜೋಳ ಬೆಳೆಗಳಿಗೆ ತಗಲುವ ಕೀಟಬಾಧೆ ನಿರ್ಮೂಲನೆಯ ಬಗ್ಗೆ ಮಾಹಿತಿ ನೀಡಲಾಯಿತು.

<><><>

ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡು, ಕೃಷಿ ಇಲಾಖೆ ಯೋಜನೆಗಳ ಪ್ರಯೋಜನ ಪಡೆದು ರೈತರು, ಅಧಿಕ ಇಳುವರಿ ಹಾಗೂ ಲಾಭ ಗಳಿಸಬಹುದು ಎಂದು ದಾವಣಗೆರೆ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಡಾಕ್ಟರ ಟಿ.ಎನ್.ದೇವರಾಜ್ ಹೇಳಿದರು. ಹರಿಹರ ತಾಲ್ಲೂಕಿನ ಸಾಲಕಟ್ಟೆ ಗ್ರಾಮದಲ್ಲಿ ಆಯೋಜಿಸಲಾದ ವಿಕಸಿತ ಕೃಷಿ ಸಂಕಲ್ಪ ರಾಷ್ಟ್ರೀಯ ಅಭಿಯಾನದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಕೀಟಶಾಸ್ತ್ರಜ್ಞ ಡಾಕ್ಟರ ಅವಿನಾಶ ಟಿ.ಜಿ ರೈತರಿಗೆ ಸಾವಯವ ಕೃಷಿ ಪದ್ಧತಿಗಳ ಬಗ್ಗೆ ಮಾಹಿತಿ ನೀಡಿದರು.

<><><>

ವಿಶ್ವ ಪರಿಸರ ದಿನಾಚರಣೆ ಹಿನ್ನೆಲೆ, ಹುಬ್ಬಳ್ಳಿಯ ಗ್ರೀನ್ ಕರ್ನಾಟಕ ಅಸೋಸಿಯೇಶನ್, ವಸುಂಧರಾ ಫೌಂಡೇಶನ್ ಹಾಗೂ ವೀ ಕೇರ್ ಫೌಂಡೇಶನ್ ನೇತೃತ್ವದಲ್ಲಿ ಹಾಗೂ ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ, ನಾಳೆ ಬೆಳಗ್ಗೆ 6 ಗಂಟೆ 30 ನಿಮಿಷಕ್ಕೆ ಹುಬ್ಬಳ್ಳಿಯಲ್ಲಿ ರನ್ ಫಾರ್ ನೇಚರ್, ಮ್ಯಾರಥಾನ್ ಆಯೋಜಿತವಾಗಿದೆ. ಈ ಕುರಿತು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ ಗ್ರೀನ್ ಕರ್ನಾಟಕ ಅಸೋಸಿಯೇಶನ್ ಅಧ್ಯಕ್ಷ ಚನ್ನು ಹೊಸಮನಿ..

<><><>

ಧ್ವನಿ: ಚನ್ನು ಹೊಸಮನಿ 48 ಸೆಕೆಂದುಗಳು

<><><>

ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಆವರಣದಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ವಾಣಿಜ್ಯಿಕ ಮರಗಳ ಮಾದರಿಗಳಿರುವ 'ಫಾರೆಸ್ಟ್ ವುಡ್ ಮ್ಯೂಸಿಯಂ' ಅನ್ನು ಉದ್ಘಾಟಿಸಲಾಯಿತು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ

<><><>

ಸೇವೆ, ಸುಶಾಸನ ಮತ್ತು ಬಡವರ ಕಲ್ಯಾಣದಂತಹ, ಮೌಲ್ಯ ತತ್ವಗಳ ಆಧಾರದ ಮೇಲೆ, ಭಾರತ ಸುದೃಢವಾಗಿ ನಡೆದಿದೆ, ಹಿಂದಿನ ಒಂದು ದಶಕದಲ್ಲಿ, ಗಮನಾರ್ಹ ಪರಿವರ್ತನೆ ಸಾಧಿಸಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ, ಆಡಳಿತದ ಚುಕ್ಕಾಣಿ ಹಿಡಿದ, ಕಳೆದ 11 ವರ್ಷಗಳಲ್ಲಿ, ಪ್ರಮುಖ ವಲಯಗಳಲ್ಲಿ, ಮಹತ್ವದ ಮೈಲುಗಲ್ಲುಗಳನ್ನು ತಲುಪಲಾಗಿದೆ. ಕೇಂದ್ರ ಸರ್ಕಾರದ ಅವಿರತ ಪ್ರಯತ್ನಗಳ ಕುರಿತು, ಆಕಾಶವಾಣಿಯ ಪ್ರಾದೇಶಿಕ ಸುದ್ದಿ ವಿಭಾಗ, ವಿಶೇಷ ಸುದ್ದಿಗಳನ್ನು, ತಮಗಾಗಿ ತರುತ್ತಿದೆ. ಶುದ್ಧ ಇಂಧನ ಮತ್ತು ವೈಜ್ಞಾನಿಕ ಹವಾಮಾನದ ಕ್ಷೇತ್ರದಲ್ಲಿ, ಭಾರತದ ಜಾಗತಿಕ ನಾಯಕತ್ವದ ಮೇಲೆ, ವರದಿ ಕೇಂದ್ರೀಕೃತವಾಗಿದೆ.

******

*ಭಾರತ ಕಳೆದ ಒಮದು ದಶಕದಲ್ಲಿ, ಶುದ್ಧ ಇಂಧನ ಕ್ಷೇತ್ರದಲ್ಲಿ, ಗಮನಾರ್ಹ ಪ್ರಗತಿ ಸಾಧಿಸಿದೆ. ಹವಾಮಾನ ಸಂಬಂಧಿ, ವಿದ್ಯಮಾನ ಗ್ರಹಿಸುವಲ್ಲಿ, ವಿಶ್ವ ನಾಯಕತ್ವದ ಮಟ್ಟಕ್ಕೆ ಏರಿದೆ. ಭಾರತ, 2024–25ರ ಆರ್ಥಿಕ ವರ್ಷದಲ್ಲಿ, 29 ದಶಾಂಶ 5, 2 ಗಿಗಾ ವ್ಯಾಟ್ ಸಾಮರ್ಥ್ಯದ ನವೀಕರಿಸಬಹುದಾದ ಇಂಧನ ಸಾಮರ್ಥ್ಯದ ಸಂವರ್ಧನೆ ಮಾಡಿದೆ. ಕಳೆದ ವರ್ಷದಲ್ಲಿ 198 ದಶಾಂಶ 7, 5 ಗಿಗಾ ವ್ಯಾಟ್‌ನಷ್ಟಿತ್ತು, ಪ್ರಸ್ತುತ 220 ದಶಾಂಶ 1–0 ಗಿಗಾವ್ಯಾಟ್‌ಗೆ ಏರಿಕೆಯಾಗಿದೆ. ಸೌರ ಹಾಗೂ ಪವನ ವಿದ್ಯುತ್ ಹಾಗೂ ಪರಮಾಣು ಸಾಮರ್ಥ್ಯದಲ್ಲಿ, ಸಾಧಿಸಿದ ಪ್ರಗತಿಯಿಂದ ಗಣನೀಯ ಹೆಚ್ಚಳ ಸಾಧ್ಯವಾದ ಪರಿಣಾಮ ಗುರುತಿಸಬಹುದು. ನವೀಕರಿಸಬಹುದಾದ ಇಂಧನಗಳನ್ನು ಆಕರ್ಷಿಸುವ ಸೂಚ್ಯಂಕದಲ್ಲಿ, ಭಾರತ ಈಗ 7 ನೇ ಸ್ಥಾನದಲ್ಲಿದೆ, ಜಾಗತಿಕ ಶುದ್ಧ ಇಂಧನ ಕ್ಷೇತ್ರದಲ್ಲಿ ಭಾರತದ ಸ್ಥಾನಮಾನ ಹೆಚ್ಚುತ್ತಿರುವ ಸಂಗತಿಯು ದ್ಯೋತಕ. ರಾಷ್ಟ್ರೀಯ ಹಸಿರು ಹೈಡ್ರೋಜನ್ ಮಿಷನ್, ವಿಸ್ತೃತ ಜೈವಿಕ ಇಂಧನ ಕಾರ್ಯಕ್ರಮಗಳು ಮತ್ತು ವಿದ್ಯುತ್ ಪ್ರವಹನದಲ್ಲಿ ಬೆಳೆಯುತ್ತಿರುವ ಬದಲಾವಣೆಯಂತಹ ಉಪಕ್ರಮಗಳು ಕಡಿಮೆ–ಇಂಗಾಲದ ಆರ್ಥಿಕತೆಗೆ ಅಡಿಪಾಯ ಹಾಕುತ್ತಿವೆ. ಶುದ್ಧ ಇಂಧನ ಬಳಕೆಯತ್ತ ಭಾರತದ ಹೆಜ್ಜೆ ಹಾಗೂ ಜಾಗತಿಕ ಹವಾಮಾನ ನಾಯಕತ್ವ ಸಾಧನೆಯೊಮದಿಗೆ ಆಳವಾದ ಸಂಬಂಧ ಹೊಂದಿದೆ. ಭಾರತವು, ಬರುವ 2030 ರ ಗುರಿಗಿಂತ ಒಂಬತ್ತು ವರ್ಷಗಳ ಮೊದಲೇ, ತನ್ನ ಸ್ಥಾಪಿತ ವಿದ್ಯುತ್ ಸಾಮರ್ಥ್ಯದ, ಶೇಕಡ 40 ರಷ್ಟು ಪಳೆಯುಳಿಕೇತರ ಇಂಧನ ಮೂಲಗಳಿಂದ ಹೊಂದುವ, COP21 ಸಾಧಿಸಿದಂತಾಗಿದೆ. ಗ್ಲ್ಯಾಸ್ಗೋದಲ್ಲಿ ಆಯೋಜಿಸಿದ್ದ COP26 ನಲ್ಲಿ, ಪ್ರಧಾನಮಂತ್ರಿ ನರೆಂದ್ರ ಮೋದಿ ಅವರು ಮಹತ್ವಾಕಾಂಕ್ಷೆಯ 'ಪಂಚಾಮೃತ' ಗುರಿಗಳನ್ನು ಘೋಷಿಸಿದರು, 2070 ರ ವೇಳೆಗೆ ನಿವ್ವಳ–ಶೂನ್ಯ ಇಂಗಾಲ ಹೊರಸೂಸುವಿಕೆಗೆ ಹಾದಿಯನ್ನು ನಿಗದಿಪಡಿಸಿದರು. ಅವರು ಪರಿಸರಕ್ಕಾಗಿ ಜೀವನಶೈಲಿ, LiFE ಮಿಷನ್ ಅನ್ನು ಸಹ ಪ್ರಾರಂಭಿಸಿದರು, ಇದು ವೈಯಕ್ತಿಕ ಮಟ್ಟದಲ್ಲಿ ಸುಸ್ಥಿರ ಜೀವನವನ್ನು ಉತ್ತೇಜಿಸುವ ಗುರಿಯನ್ನು ಹೊಂದಿದೆ. ಭಾರತ, ಅಂತಾರಾಷ್ಟ್ರೀಯ ಹವಾಮಾನ ಕ್ಷೇತ್ರ ಸಹಕಾರವನ್ನು ರೂಪಿಸುವಲ್ಲಿ, ಮಹತ್ವದ ಪಾತ್ರ ವಹಿಸಿದೆ.*

*ಭಾರತ ಅಂತಾರಾಷ್ಟ್ರೀಯ ಸೌರ ಒಕ್ಕೂಟ (ISA) ಮತ್ತು ವಿಪತ್ತು ಸ್ಥಿತಿಸ್ಥಾಪಕ ಮೂಲಸೌಕರ್ಯ ಒಕ್ಕೂಟ (CDIR) ದ ಸ್ಥಾಪಕ ಸದಸ್ಯ ಮತ್ತು ಪ್ರಮುಖ ಚಾಲಕವಾಗಿ, ಭಾರತ ನೇತೃತ್ವ ವಹಿಸಿದೆ. ಈ ಎರಡೂ ವೇದಿಕೆಗಳು ಶುದ್ಧ ಇಂಧನ ಕ್ಷೇತ್ರದ ಪ್ರವೇಶ ಮತ್ತು ವಿಪತ್ತು ಸ್ಥಿತಿಸ್ಥಾಪಕತ್ವದತ್ತ ಸಿದ್ಧತೆಗಳನ್ನು ವಿಶೇಷವಾಗಿ, ವಿಶ್ವದ ದಕ್ಷಿಣ ಭಾಗದ ದೇಶಗಳನ್ನು ಉತ್ತೇಜಿಸುತ್ತವೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದಂತೆ, 'ನಮ್ಮ ಗ್ರಹವು ಒಂದೇ, ಆದರೆ ನಮ್ಮ ಪ್ರಯತ್ನಗಳು ಹಲವು ಆಗಿರಲಿ'... ಎಂಬ ಮಾತಿನ ತಥ್ಯದಂತೆ, ಕಳೆದ ಒಂದು ದಶಕದ ಭಾರತದ ಪ್ರಯಾಣ, ಸುಸ್ಥಿರ ಅಭಿವೃದ್ಧಿ, ಕೇವಲ ಒಂದು ಗುರಿಯಲ್ಲ; ಪ್ರಗತಿಯಲ್ಲಿ ಅಡಕವಾಗಿರುವ ವಾಸ್ತವ ಎಂಬುದನ್ನು ಸಾಕ್ಷೀಕರಿಸಿದೆ.*

<><><>

ಇಂದು, ನಾಡಿನಾದ್ಯಂತ ತ್ಯಾಗ ಮತ್ತು ಬಲಿದಾನದ ಸಂಕೇತವಾದ 'ಬಕ್ರೀದ್ ಹಬ್ಬ– ಆಚರಿಸಲಾಗುತ್ತಿದೆ. ಧಾರವಾಡ ಹಾಗೂ ಹುಬ್ಬಳ್ಳಿಯಲ್ಲಿ ಮುಸ್ಲಿಂ ಬಾಂಧವರು ಮಸೀದಿಗಳಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿ, ಶುಭಾಶಯ ವಿನಿಮಯ ಮಾಡಿಕೊಳ್ಳಲಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ ಸೇರಿದಂತೆ ಅನೇಕ ಗಣ್ಯರು, ಮುಸ್ಲಿಂ ಬಾಂಧವರಿಗೆ ಬಕ್ರೀದ್ ಹಬ್ಬದ ಶುಭಾಶಯಗಳನ್ನು ಕೋರಿದ್ದಾರೆ.

<><><>

ಸಮುದ್ರ ಮೀನುಗಾರಿಕೆ ಸಂದರ್ಭ ನಾಪತ್ತೆಯಾದ, ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು, ಬೆಂಗರೆಯ, ಇಬ್ಬರು ಮೀನುಗಾರರ ಕುಟುಂಬದವರನ್ನು ಭೇಟಿ ಮಾಡಿದ ಮೀನುಗಾರಿಕೆ ಖಾತೆ ಸಚಿವ ಮಂಕಾಳ ವೈದ್ಯ ಕುಟುಂಬಸ್ಥರಿಗೆ ಸಾಂತ್ವನ ತಿಳಿಸಿ, ತಲಾ 10 ಲಕ್ಷ ರೂಪಾಯಿ ಚೆಕ್ ವಿತರಿಸಿದರು. ಮಂಗಳೂರು, ಕೋಸ್ಟ್ ಗಾರ್ಡ್ ಕಚೇರಿಯಲ್ಲಿ ಅವರು ವಿಶೇಷ ಸಭೆ ನಡೆಸಿದರು.

<><><>

ಹಾವೇರಿ ಜಿಲ್ಲೆಯಲ್ಲಿ ಬಾಲಕಾರ್ಮಿಕ ರಕ್ಷಣೆ ಕಾರ್ಯಾಚರಣೆ ಸಂದರ್ಭ ಒಟ್ಟು 27 ಬಾಲ ಕಾರ್ಮಿಕರನ್ನು ಪತ್ತೆ ಮಾಡಲಾಗಿದೆ ಎಂದು ಜಿಲ್ಲಾ ಕಾರ್ಮಿಕ ಅಧಿಕಾರಿ ತರನ್ನುಮ್ ಬೆಂಗಾಲಿ ತಿಳಿಸಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

ರಾಜ್ಯದ ಪ್ರತಿ ಗ್ರಾಮ ಪಂಚಾಯಿತಿಗಳಲ್ಲೂ ಕರ್ನಾಟಕ ಪಬ್ಲಿಕ್ ಶಾಲೆ –ಮಧು ಬಂಗಾರಪ್ಪ

ಮೀನುಗಾರರ ಸುರಕ್ಷತೆ ಸರ್ಕಾರದ ಆದ್ಯತೆ– ಮಂಕಾಳ ವೈದ್ಯ

ಇಂದು, ಮುಸ್ಲಿಂ ಬಾಂಧವರಿಂದ, ಬಕ್ರೀದ್ ಆಚರಣೆ: ಗಣ್ಯರಿಂದ ಶುಭಾಶಯ

ಕೇಂದ್ರ ಸರ್ಕಾರಕ್ಕೆ 11 ವರ್ಷ ಪೂರ್ಣ: ಶುದ್ಧ ಇಂಧನ ಕ್ಷೇತ್ರದಲ್ಲಿ ಭಾರತ ಜಾಗತಿಕ ನೇತಾರ

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ

<><><>

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ

<><><>